9. 24 ಪ್ರಕರಣಗಳಲ್ಲಿ ವಿಚಾರಣೆ ನಡೆಸಿ ಒತ್ತುವರಿ ತೆರವಿಗಾಗಿ ಕ್ರಮವಹಿಸಲಾಗಿದೆ ವಿವರ ಲಗತ್ತಿಸಿದೆ. ಮೈಸೂರು ನಗರದ ಸುತ್ತ ಮುತ್ತ ಒತ್ತುವರಿ ಮಾಡಿದ ಸರ್ಕಾರಿ ಜಮೀನು ಅಕ್ರಮ ಸಕ್ರಮ ನಿಯಮಗಳ ಅನುಸಾರ ಸಕ್ರಮಗೊಳಿಸಲು ಸಾಧ್ಯವಾಗದ ಕಾರಣ ಅವರ ಕೋರಿಕೆಗಳನ್ನು ತಿರಸ್ಕರಿಸಲಾಗಿದ್ದು, ಅಂತಹ ಒತ್ತುವರಿಗಳನ್ನು ತೆರವುಗೊಳಿಸುವುದಕ್ಕೆ ನೋಟೀಸು ನೀಡಲು ಕ್ರಮವಹಿಸಲಾಗುತ್ತಿದೆ.

ಉ)

	ಸಂಖ್ಯೆ	ವಿಸ್ತೀರ್ಣ
ಈವರೆವಿಗೆ ಪರಿಶಿಷ್ಟ ಜಾತಿ / ಪಂಗಡದವರಿಗೆ ಮಂಜೂರಾಗಿರುವ ಜಮೀನಿನ ವಿವರ	575	1396–31 ಎಕರೆ
ಈ ವರೆವಿಗೆ ಷರತ್ತು ಉಲ್ಲಂಘನೆ ಪತ್ತೆ ಹಚ್ಚಿರುವ ಪ್ರಕರಣಗಳ ವಿವರ	247	437–36 ಎಕರೆ
ಈ ವರೆವಿಗೆ ವಿಲೇವಾರಿಯಾದ ಪ್ರಕರಣಗಳು	213	320–28 ಎಕರೆ
ಮೂಲ ಮಂಜೂರಿದಾರರಿಗೆ ಬೌತಿಕವಾಗಿ ಸ್ವಾಧೀನ ನೀಡಿದ ಪ್ರಕರಣಗಳು	32	38–14 ಎಕರೆ
ಮೂಲ ಮಂಜೂರಿದಾರರಿಗೆ ಬೌತಿಕವಾಗಿ ಸ್ವಾಧೀನ ನೀಡಲು ಬಾಕಿ ಇರುವ ಪ್ರಕರಣಗಳು ನೀಡಿದ ಪ್ರಕರಣಗಳು	ಇಲ್ಲ	ಇಲ್ಲ
ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು	34	117–08 ಎಕರೆ

ನಿರ್ಮಿತ ಕೇಂದ್ರ ಕೈಗೊಂಡ ಕಾಮಗಾರಿಗಳು

(194) 257

ಶ್ರೀ. ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)

ಎ) ಕರ್ನಾಟಕದ ಗ್ರಾಮೀಣ ವಿಭಾಗಗಳಲ್ಲಿರುವ ಹಾಗೂ ಬೆಂಗಳೂರು ನಗರದ 6 ವಿಭಾಗಗಳಲ್ಲಿರುವ ಜಂಟಿ ಆಯುಕ್ತರ (ಜಾರಿ) ಹುದ್ದೆಗಳ ಸಂಖ್ಯೆ ಕುರಿತ ವಿವರವನ್ನು ಒದಗಿಸುವುದು;

ಬಿ) ಬೆಂಗಳೂರು ನಗರದ ಪ್ರತಿ ವಿಭಾಗದಲ್ಲಿಯೂ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಈ ಹುದ್ದೆ ಇದೆಯೇ;

ಸಿ) ಬೆಂಗಳೂರು ನಗರದ 6 ವಿಭಾಗಗಳಿಗೂ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಈ ಹುದ್ದೆಯನ್ನು ಸೃಷ್ಟಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; (ಇದ್ದಲ್ಲಿ, ಯಾವಾಗ ಅನುಷ್ಠಾನಗೊಳಿಸಲಾಗುವುದು)?

ಶ್ರೀ ಜಗದೀಶ್ ಶೆಟ್ಟರ್, ಮುಖ್ಯ ಮಂತ್ರಿಗಳು:

ಎ) ಕರ್ನಾಟಕದ ಗ್ರಾಮೀಣ ವಿಭಾಗಗಳಲ್ಲಿರುವ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಗಳ ಹುದ್ದೆ ಸಂಖ್ಯೆ 7

1	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಮೈಸೂರು ವಿಭಾಗ, ಮೈಸೂರು.
2	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಮಂಗಳೂರು ವಿಭಾಗ, ಮಂಗಳೂರು.
3	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಮಲೆನಾಡು ವಿಭಾಗ, ಶಿವಮೊಗ್ಗ
4	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಹುಬ್ಬಳ್ಳಿ
5	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಉತ್ತರ ವಲಯ, ಬೆಳಗಾಂ
6	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಪೂರ್ವ ವಲಯ, ಗುಲ್ಬರ್ಗಾ
7	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಕೇಂದ್ರ ವಲಯ, ಬಳ್ಳಾರಿ. ಬೆಂಗಳೂರಿನಲ್ಲಿರುವ ಎಲ್ಲಾ 6 ವಿಭಾಗಗಳು ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರೊಬ್ಬರ (ಜಾರಿ) ನೇತೃತ್ವದಲ್ಲಿ ಇದೆ. ಜಂಟಿ ಆಯುಕ್ತರು (ಜಾರಿ) ಹುದ್ದೆ ಇರುವುದಿಲ್ಲ.

ಬಿ) ಇಲ್ಲ

ಸಿ) ಇಲ್ಲ